ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ 622/2024

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-01

**ಸಾಕ್ಷಿಗೆ ದಿಃ 29.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಮಹಜರಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ2 ಎಂದು ನಿ.ಪಿ2(ಎ) ಸಹಿ ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ನನ್ನ ಗಂಡನ ಮರಣ ಪ್ರಮಾಣ ಪತ್ರ ಮತ್ತು ಆಧಾರ ಕಾರ್ಡನ್ನು ನೀಡಿರುತ್ತೇನೆ. ನನ್ನ ಗಂಡ ದಿನಾಂಕ 11.01.2011 ರಂದು ಮರಣ ಹೊಂದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃ ಸಿ.ಎಸ್.ಸಿ ವಕೀಲರಿಂದಃ**

ನಾನು ಡಿಗ್ರಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ದೂರನ್ನು ನಾನೇ ಬರೆದು ನೀಡಿರುತ್ತೇನೆ. ದೂರಿಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತು ಎಂದು ಹೇಳುತ್ತಾರೆ. ನೊಂದಣಿ ಕಚೇರಿಯಲ್ಲಿ ಕೆಲಸ ಮಾಡುವವರನ್ನು ವಿಚಾರಣೆ ಮಾಡಿರುತ್ತೇನೆ ಅವರ ಹೆಸರು ಮತ್ತು ಹುದ್ದೆ ಗೊತ್ತಿಲ್ಲ. ಆರ್.ಐ ಮತ್ತು ವಿ.ಐ ಯಾರಿದ್ದರೆಂದು ನನಗೆ ಗೊತ್ತಿಲ್ಲ. ಆರೋಪಿ ಸುರೇಶ ಅವರು ಕರೆದುಕೊಂಡು ಬಂದಿದ್ದರು ಅವರು ಬಂದಿದ್ದರು ಎಂದು ಹೇಳುತ್ತಾರೆ.

ದಿನಾಂಕ 31.12.2021 ರಲ್ಲಿ ದೂರನ್ನು ನೀಡಿದಾಗ ಬಂದಿರುತ್ತಾರೆಂದು ಹೇಳುತ್ತಾರೆ. ಅವರನ್ನು ಪೋಲಿಸರು ಕರೆಸಿದ್ದರು. ನವಂಬರ 2021 ರಲ್ಲಿಯೇ ದೂರನ್ನು ನೀಡಿರುತ್ತೇನೆ ದಿನಾಂಕ ನನಗೆ ಗೊತ್ತಿಲ್ಲ. ನಾನು ಠಾಣೆಗೆ ಎಷ್ಟು ಸಾರಿ ಹೋಗಿರುತ್ತೇನೆಂದು ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಅಂದಾಜು 4-5 ಬಾಗಿ ಹೋಗಿರುತ್ತೇನೆಂದು

ಹೇಳುತ್ತಾರೆ. ಡಿಸೆಂಬರ 31 ಮತ್ತು ಜನವರಿಗೆ 22 ರಲ್ಲಿ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಪಿ.ಎಸ್.ಐ ಅವರು ವರ್ಗಾವಣೆ ಆಗಿ ಬಳಿಕ ಬೇರೆ ಪಿ.ಎಸ್.ಐ ಬಂದ ಬಳಿಕ ಹೋಗಿರುತ್ತೇನೆಂದು ಹೇಳುತ್ತಾರೆ. ಏನೇನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆಂದು ದೂರಿನಲ್ಲಿ ಹೇಳಿದ್ದು ಈಗ ನನಗೆ ಗೊತ್ತಿಲ್ಲ.

ನಾನು ಕಿಚ್ಚಾವಾಡಿ ಗ್ರಾಮದವರೆಂದು ತೋರಿಸಲು ದಾಖಲೆಗಳನ್ನು ನೀಡಿರುತ್ತೇನೆ. ಏನು ದಾಖಲೆಂದರೆ ಸಾಕ್ಷಿ ಪಡಿತರ ಚೀಟಿ ಚುನಾವಣೆ ಗುರುತಿನ ಚೀಟಿ ಮತ್ತು ಆಧಾರ ಕಾರ್ಡ ನೀಡಿರುತ್ತೇನೆಂದು ಹೇಳುತ್ತಾರೆ. ಪಡಿತರವನ್ನು ನನ್ನ ಗಂಡ ತರುತ್ತಿದ್ದು ನಾನು ಹೋಗುತ್ತಿರಲಿಲ್ಲ ಎಲ್ಲಿ ಎಂದು ನನಗೆ ಗೊತ್ತಿಲ್ಲ. ಕಿಚ್ಚಾವಾಡಿಯಲ್ಲಿ ಪಡಿತರ ಅಂಗಡಿ ಎಲ್ಲಿದೆಂದು ನನಗೆ ಗೊತ್ತಿಲ್ಲ. ಬೇರೆ ಕಡೆ ಪಡಿತರವನ್ನು ತರುತ್ತಿದ್ದೇವು ಎಂದು ಹೇಳುತ್ತಾರೆ. ಕಿಚ್ಚಾವಾಡಿ ಗ್ರಾಮದಲ್ಲಿ ಆಧಾರ ಕಾರ್ಡ ಚುನಾವಣಾ ಗುರುತಿನ ಚೀಟಿಯನ್ನು ನೀಡಿರುತ್ತೇನೆ. ಮೊದಲು ನನ್ನ ಮತ್ತು ನನ್ನ ಗಂಡನ ಚುನಾವಣಾ ಗುರುತಿನ ಚೀಟಿ ಹು.ದುರ್ಗದಲ್ಲಿದ್ದು ಈಗ ತುಮಕೂರಿನಲ್ಲಿ ಮಾಡಿಸಿಕೊಂಡಿರುತ್ತೇನೆಂದು ಹೇಳುತ್ತಾರೆ.

ನನ್ನ ಮೂಲ ಊರು ಕಿಚ್ಚಾವಾಡಿ ಆಗಿರುತ್ತದೆ. ಸದರಿ ಗ್ರಾಮದಲ್ಲಿ ಮನೆ ಇದ್ದು ಅದನ್ನು ನನ್ನಿ ಗಂಡ ಅವರ ಸಹೋದರರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿ ಮೊದಲು ಜ್ವಾಲಮ್ಮಾ ಅವರಿಗೆ ಸೇರಿತ್ತು. ಅವರಿಗೆ ಒಬ್ಬಳೆ ಮಗಳು ಇದ್ದು ಅವರ ಹೆಸರು ಪಾಯಮ್ಮಾ ಆಗಿರುತ್ತದೆ. ಪಾಯಮ್ಮಾ ಅವರಿಗೆ ನನ್ನ ಗಂಡ ಒಬ್ಬರೆ ಮಗನಾಗಿರುತ್ತಾನೆ. ಜ್ವಾಲಮ್ಮಾ ಅವರಿಗೆ ಅವರ ಗಂಡನಿಂದ ಬಂದಿರುತ್ತದೆ. ಅವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಸದರಿ ಆಸ್ತಿ ಪಾಯಮ್ಮಾ ಅವರಿಗೆ ಅವರ ತಾಯಿಯಿಂದ ಬಂದಿರುತ್ತದೆ. ಪಾಯಮ್ಮಾ ಅವರನ್ನು ಮದುವೆ ಮಾಡಿಕೊಟ್ಟಿದ್ದು ಅವರ ಗಂಡನ ಊರಿನ ಹೆಸರು ಗೊತ್ತಿಲ್ಲ.

ನಾನು ವಂಶವೃಕ್ಷವನ್ನು ಪೋಲಿಸರಿಗೆ ನೀಡಿರುತ್ತೇನೆ. ಪಾಯಮ್ಮಾ ಮತ್ತು ಜ್ವಾಲಮ್ಮಾ ಅವರು ಮರಣ ಹೊಂದಿದ್ದು ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿಲ್ಲ.

ಜ್ವಾಲಮ್ಮಾ ಅವರು ನನ್ನ ಗಂಡನ ಹೆಸರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ಕ್ರಯ ಪತ್ರ ನಾನು ನ್ಯಾಯಾಲಯಕ್ಕೆ ಹಾಜರುಪಸಿಡಿರುತ್ತೇನೆ. ಸರ್ವೆ ನಂ 52/3 ರಲ್ಲಿರುವ 6 ಗುಂಟೆ ಜಮೀನಿಗೂ ನಮಗೂ ಸಂಬಂದ ಇಲ್ಲವೆಂದರೆ ಸರಿಯಲ್ಲ. ದೂರಿನ್ನು ನೀಡಿದ ದಿನವೇ ಪೊಲಿಸರು ಮಹಜರಗೆ ಸಹಿ ಪಡೆದಿರುತ್ತಾರೆ. ನನ್ನ ಜೊತೆ ಚಾಸಾ 6 ಮತ್ತು 7 ಸಹ ಸಹಿ ಮಾಡಿರುತ್ತಾರೆ. ಅವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ.

ಮಹಜರನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಪೋಲಿಸರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಗಂಡ ಸಹಿ ಮಾಡುತ್ತಿದ್ದರಾ ಅಥವಾ ಹೆಬ್ಬಟ್ಟು ಹಾಕುತ್ತಿದ್ದರಾ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಬೆಂಗಳೂರಿನ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ನಾನು ಕಿಚ್ಚಾವಾಡಿ ಗ್ರಾಮಕ್ಕೂ ಸೇರಿಲ್ಲ ಮತ್ತು ಸದರಿ ಆಸ್ತಿ ನಮಗೆ ಸೇರಿಲ್ಲ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆಧಾರ ಕಾರ್ಡ ಮತ್ತು ಮರಣ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ಆಸ್ತಿಯನ್ನು ಮೂಲ ಮಾಲಿಕರಿಂದ ಖರೀದಿ ಮಾಡಿದ್ದು ಯಾವುದೇ ದಾಖಲೆಯನ್ನು ಸೃಷ್ಟಿ ಮಾಡಿಲ್ಲವೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇಲ್ಲ ಅಕ್ರಮ ಲಾಭ ಪಡೆಯುವ ಕುರಿತು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 52/3 ಕಿಚ್ಚಾವಾಡಿ ಗ್ರಾಮದಿಂದ ಯಾವ ದಿಕ್ಕಿಗೆ ಬರುತ್ತದೆಂದು ನನಗೆ ಗೊತ್ತಿಲ್ಲ. ಸದರಿ ಜಮೀನು ನಾನು ನೋಡಿರುವುದಿಲ್ಲ ಮತ್ತು ಉಳುಮೆ ಸಹ ಮಾಡಿರುವುದಿಲ್ಲ. ನನ್ನ ಗಂಡ ಮಾಡುತ್ತಿದ್ದರು ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.